ಶಿಗ್ಗಾಂವ ತಾಲ್ಲೂಕಿನ 6 ಕೆರೆಗಳನ್ನು ಹಾಗೂ ಸವಣೂರ ತಾಲ್ಲೂಕಿನ 3 ಕೆರೆಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ 11ನೇ ಹಣಕಾಸು ಆಯೋಗದ ಯೋಜನೆ ಅಡಿ ದುರಸ್ತಿ ಗೊಳಿಸಲಾಗಿದೆ ಬಾಕಿ ಉಳಿದ ಸದರಿ ಕೆರೆಗಳ ಪೂರಕ ಕಾಲುವೆ ದುರಸ್ತಿಗೊಳಿಸಲು ಹಾಗೂ ಕೆರೆಗೆ ಹೂಳೆತ್ತುವ ಕೆಲಸಗಳನ್ನು ಅನುದಾನದ ಲಭ್ಯತೆಯ ಮೇರೆಗೆ ತೆಗೆದುಕೊಳ್ಳಲಾಗುವುದು

553(684) ಶ್ರೀಮತಿ ಸಿಂಧೂರ ಜಿ. ರಾಜಶೇಖರ್ (ಶಿಗ್ಗಾಂವ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಕಾಪೂರ ಪಟ್ಟಣ ಹಾಗೂ ಸವಣೂರ ನಗರ ಪದವಿ ಮಹಾವಿದ್ಯಾಲಯಗಳಲ್ಲಿ (ಪದವಿ ಕಾಲೇಜ್) ಉಪನ್ಯಾಸಕರು ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನದಲ್ಲಿಯೇ?

ಆ) ಸವಣೂರ ನಗರ ಹಾಗೂ ಬಂಕಾಪೂರ ಪಟ್ಟಣ ಪದವಿ ಮಹಾವಿದ್ಯಾಲಯಗಳಲ್ಲಿ (ಪದವಿ ಕಾಲೇಜ್) ಉಪನ್ಯಾಸಕರು ಹಾಗೂ ಸಿಬ್ಬಂದಿ ಕೊರತೆ ಇದ್ದು, ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿಯೇ?

ಇ) ಹಾಗಿದ್ದಲ್ಲಿ, ಸವಣೂರ ನಗರ ಹಾಗೂ ಬಂಕಾಪೂರ ಪಟ್ಟಣ ಪದವಿ ಮಹಾವಿದ್ಯಾಲಯಗಳಿಗೆ ಉಪನ್ಯಾಸಕರ ಹಾಗೂ ಸಿಬ್ಬಂದಿ ಕೊರತೆ ತುಂಬಲು ಸರ್ಕಾರ ಎಂದಿನಿಂದ ಕ್ರಮ ಕೈಗೊಳ್ಳುವುದು?

ಶ್ರೀ ಡಿ ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ಹೌದು

ಇ) ಇಲಾಖೆಯಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ 610 ಉಪನ್ಯಾಸಕರ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ತುಂಬುಲು ಪ್ರಸ್ತಾಪಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ ಉಪನ್ಯಾಸಕರ ಆಯ್ಕೆಯಾದ ನಂತರ ಸದರಿ ಕಾಲೇಜುಗಳಲ್ಲಿ ಕೊರತೆ ಇರುವ ಉಪನ್ಯಾಸಕರನ್ನು ತುಂಬಲಾಗುವುದು ಪ್ರಸ್ತುತ ಖಾಲಿಯಿರುವ ಬೋಧಕೇತರ ಹುದ್ದೆಗಳನ್ನು ನೇರ ನೇಮಕಾತಿ, ಬಡ್ತಿ ಸಮಯದಲ್ಲಿ ತುಂಬಲಾಗುವುದು